ಪ್ರಶಾಂತನಿಗೆ ಮೊದಲಿನಿಂದಲೂ ಜವಾಬ್ದಾರಿ ಕಡಿಮೆ. ಒಂದು ರೀತಿಯ ಹುಡುಗಾಟದ ಹುಡುಗನೇ. ವಿಪರೀತ ಮಾತಿನ ಚಟಾಕಿ, ಜೋರು ನಗು. ಪ್ರಶ್ನಾ ಕೂಡ ಅರಳು ಹುರಿದಂತೆ ಪಟ ಪಟ ಮಾತನಾಡುವವಳು. ಇಬ್ಬರ ಜೀವನ ಚೆನ್ನಾಗಿಯೇ ಸಾಗಿರಬೇಕು. ಅವರಿಗೆ ಆಗಲೇ ಐದುವರ್ಷದ ಮಗಳೂ ಇದ್ದಾಳೆ.

ಇಷ್ಟರಲ್ಲಿಯೇ ನನ್ನ ಮದುವೆ ಕೂಡ ಆಯಿತು. ಶ್ರದ್ಧಾ ನಮ್ಮ ಕಂಪೆನಿಯಲ್ಲೇ ಕಾರ್ಯ ನಿರ್ವಹಿಸುತ್ತಿದ್ದಳು. ಮಾತು ಕಡಿಮೆ ಆದರೂ ಕೂಡ ಅತೀ ಕಡಿಮೆ ಅಂತೇನಿಲ್ಲ. ಅವಳ ಜವಾಬ್ದಾರಿಯುತ ನಡವಳಿಕೆ ನನಗೆ ಇಷ್ಟವಾಗಿತ್ತು. ನಮಗೆ ಮಕ್ಕಳಿಲ್ಲ ಎನ್ನುವುದೊಂದು ಬಿಟ್ಟರೆ ನಮ್ಮದು ಸುಖೀ ಸಂಸಾರವೇ. ಶ್ರದ್ಧಾಳ ಕಡೆಗೆ ತಿರುಗಿ ನೋಡಿದೆ. ಮುಗ್ಧವಾಗಿ ಮಲಗಿದ್ದಳು. ತನಗೆ ಮಕ್ಕಳನ್ನು ಕಂಡರೆ ಇಷ್ಟ, ಅದರ ನೋವು ಇದೆ... ಅದಕ್ಕಾಗಿ ಹರಕೆ... ದೇವರು... ಯಾವ ಪ್ರಯತ್ನವನ್ನೂ ಮಾಡದೇ ಸುಮ್ಮನಿರುತ್ತಾಳೆ. ಅವಳ ನಿಲುವು ಇಷ್ಟೆ...

‘ಎಲ್ಲವನ್ನೂ ಭಗವಂತನೇ ಮಾಡಿದ್ದಾನೆ
ಎಂದಮೇಲೆ ಅವನು ಇದನ್ನು ಕೊಡಲಿಲ್ಲ
ಎಂದು ಅಳುವುದು ಯಾಕೆ? ಇದನ್ನೂ
ಅವನೇ ಮಾಡಿದ್ದಾನೆ. ಅಥವಾ
ಎಲ್ಲವನ್ನೂ ನಾವೇ ಮಾಡಿದ್ದೇವೆ
ಎನ್ನುವುದಾದರೆ ಇದು ನಮ್ಮಿಂದ
ಸಾಧ್ಯವಾಗದೇ ಇರುವ ಕೆಲಸ
ಎಂದು ತಿಳಿದು ಸುಮ್ಮನಿರಬೇಕು...
ಯಾರನ್ನೂ ಯಾವುದಕ್ಕೂ
ಪೀಡಿಸಬಾರದು...
ಭಗವಂತನನ್ನು ಕೂಡ.’

